**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**
ದಿಃ 05-04-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ವಕೀಲರವರಿಂದಃ

ನನ್ನ ತಂದೆತಾಯಿ ವಾದಿಯ ಗಂಡನನ್ನು ದಾವಾಸ್ವತ್ತು ಮಾರಾಟ ಮಾಡುತ್ತಿರುವುದಾಗಿ ಖರೀದಿಸಬೇಕೆಂದು ದಿಃ01-10-2000 ರಂದು ಕೋರಿದ್ದರು ಎಂದರೆ ಸರಿಯಲ್ಲ. ನನ್ನ ತಂದೆತಾಯಿಗೆ ಹಣಕಾಸು ಸಮಸ್ಯೆ ಇದ್ದರಿಂದ ದಾವಾಸ್ವತ್ತನ್ನು ಮಾರಾಟ ಮಾಡಲು ಹೇಳಿದ್ದು ವಾದಿಯ ಗಂಡ ಖರೀದಿಸಲು ಒಪ್ಪಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆತಾಯಿ ಮತ್ತು ವಾದಿಯ ಗಂಡ ಹಾಗೂ ಸಾಕ್ಷಿದಾರರ ಸಮ್ಮುಖದಲ್ಲಿ ದಾವಾಸ್ವತ್ತಿನ ಬೆಲೆ 2,800/- ರೂಪಾಯಿ ನಿಗದಿಯಾಗಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆತಾಯಿ ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಹದ್ದುಬಸ್ತು, ಸರ್ವೆ ಸ್ಕೆಚ್, ಮುಟೇಷನ್ ಮತ್ತು ಆರ್ ಟಿ ಸಿ ಯನ್ನು ತಯಾರಿಸಿ ವಾದಿಯ ಗಂಡನ ಗಮನಕ್ಕೆ ತಂದು ಕ್ರಯಪತ್ರ ಬರೆದುಕೊಡುವುದಾಗಿ ಒಪ್ಪಿದ್ದರು ಎಂದರೆ ಸರಿಯಲ್ಲ. ಕ್ರಯದ ಕರಾರುಪತ್ರ ಬರೆದುಕೊಡುವಾಗ ದಾವಾಸ್ವತ್ತಿನ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2000 ನೇ ಇಸವಿಯಲ್ಲಿ ದಾವಾಸ್ವತ್ತಿನ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿತ್ತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಿ ನನ್ನ ತಂದೆಯ ಹೆಸರಿನಲ್ಲಿರದೇ ನನ್ನ ತಾಯಿ ಹೆಸರಿನಲ್ಲಿದೆ ಎನ್ನುತ್ತಾರೆ. 2000 ನೇ ಇಸವಿಯಲ್ಲಿ ದಾವಾಸ್ವತ್ತು ನನ್ನ ಅಜ್ಜಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದಿಃ22-04-2003 ರಲ್ಲಿ ನನ್ನ ತಂದೆ ಮರಣ ಹೊಂದಿದ್ದಾರೆಂದರೆ ಸರಿ. ನನ್ನ ತಂದೆ ಮರಣ ಹೊಂದಿದ್ದರಿಂದ ನಾವು ಶ್ಲೋಕದಲ್ಲಿದ್ದು ಎಂ ಆರ್ ಮತ್ತು ಆರ್ ಟಿ ಸಿ ಗಳನ್ನು ಮಾಡಿಸಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯ ಹೆಸರಿಗೆ ಆಗಿದೆ

ಎನ್ನುತ್ತಾರೆ. ನನ್ನ ತಾಯಿಯ ಹೆಸರಿಗೆ ಯಾವಾಗ ಆರ್ ಟಿ ಸಿ ಬಂದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿದ್ದ ಎಷ್ಟು ದಿನಕ್ಕೆ ನನ್ನ ತಾಯಿಯ ಹೆಸರಿಗೆ ಆರ್ ಟಿ ಸಿ ಬಂದಿದೆ ಎಂದು ನನಗೆ ನೆನಪಿಲ್ಲ. ನನ್ನ ತಂದೆ ಮರಣ ಹೊಂದಿದ್ದಾಗ ವಾದಿಗಳು ಕೂಡಾ ನಮ್ಮ ಸಂಬಂಧಿಕರಾಗಿರುವುದರಿಂದ ದಾಖಲಾತಿಗಳನ್ನು ಮಾಡಿಸುವಂತೆ ಒತ್ತಾಯಿಸಲಿಲ್ಲ ಎಂದರೆ ಸರಿಯಲ್ಲ. ದಿಃ15-01-2004 ರಲ್ಲಿ ವಾದಿಯ ಗಂಡ ಮರಣ ಹೊಂದಿದ್ದರು ಎಂದರೆ ಸರಿ. ಆದ್ದರಿಂದ ವಾದಿಯವರು ದಾಖಲಾತಿ ಮಾಡಿಕೊಡುವಂತೆ ಒತ್ತಾಯಿಸಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾಂತರ ಆರ್ ಆರ್ ಸಿ ಆರ್ 1793/2011-12 ರಂತೆ ನನ್ನ ತಂದೆಯ ಹೆಸರಿಗೆ ಆರ್ ಟಿ ಸಿ ಬಂದಿದೆ ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿನಲ್ಲಿದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನನ್ನ ತಾಯಿಯು ನನ್ನ ತಂದೆಯ ಹೆಸರಿಗೆ ವರ್ಗಾಯಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾಂತರ ನನ್ನ ತಾಯಿಯ ಹೆಸರಿಗೆ ಆರ್ ಟಿ ಸಿ ಬಂದಿದೆ ಎನ್ನುತ್ತಾರೆ. ನನ್ನ ತಂದೆ ಮರಣ ಹೊಂದುವ ಪೂರ್ವದಲ್ಲಿ ನನ್ನ ಅಜ್ಜಿಯ ಹೆಸರಿನಲ್ಲಿದ್ದೂ ನಂತರ ನನ್ನ ತಂದೆಯ ಹೆಸರು ನಂತರ ನನ್ನ ತಾಯಿಯ ಹೆಸರಿಗೆ ಬಂದಿದೆ. ನನ್ನ ಅಜ್ಜಿಯಿಂದ ನನ್ನ ತಂದೆಯ ಹೆಸರಿಗೆ ಖಾತಾ ಬದಲಾವಣೆಯಾದ ಎಂ ಆರ್ ನ್ನು ಹಾಜರುಪಡಿಸಲಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿಯಿಂದ ನನ್ನ ತಂದೆಗೆ ಆಗಿರುವ ದಾಖಲೆಗಳನ್ನು ನಾನು ನೋಡಿಲ್ಲ. ನನ್ನ ತಂದೆ ಸಾಯುವ ಪೂರ್ವದಲ್ಲಿ ನನ್ನ ಅಜ್ಜಿಯ ಹೆಸರಿನಲ್ಲಿದ್ದೂ ನಂತರ ನನ್ನ ತಾಯಿಯು ನನ್ನ ತಂದೆಯ ಹೆಸರಿಗೆ ದಾವಾಸ್ವತ್ತಿನ ಆರ್ ಟಿ ಸಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. 2012 ರಲ್ಲಿ ನನ್ನ ತಂದೆಯ ಹೆಸರಿಗೆ ಆರ್ ಟಿ ಸಿ ವಾದ ನಂತರವೂ ಕೂಡಾ ವಾದಿಯು ಪ್ರತಿವಾದಿಗಳನ್ನು ಕ್ರಯಪತ್ರ ಬರೆದುಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ನಾವು ಒಪ್ಪಿದ್ದರಿಂದ ವಾದಿಯು ನಮ್ಮ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ ಎಂದರೆ ಸರಿಯಲ್ಲ. ನಂತರವೂ ಕೂಡಾ ಹಲವಾರು ಭಾರಿ ವಾದಿಯು

ಕ್ರಯಪತ್ರ ಬರೆದುಕೊಡುವಂತೆ ಕೇಳಿದ್ದು ಆದರೆ ನಾವು ಕ್ರಯಪತ್ರ ಬರೆದುಕೊಡದೇ ಮುಂದೂಡತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. 2014ರ ನಂತರ ಕ್ರಯಪತ್ರ ಬರೆದುಕೊಡಲು ಹೆಚ್ಚುವರಿ 50 ಸಾವಿರ ನೀಡುವಂತೆ ಒತ್ತಡ ಹಾಕಿದ್ದೆ ಎಂದರೆ ಸರಿಯಲ್ಲ. ದಿಃ08-05-2015ರಂದು ವಾದಿಯು ಕ್ರಯಪತ್ರ ಬರೆದುಕೊಡುವಂತೆ ಕೋರಿ ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ. ಅದರಂತೆ ದಿಃ 16-05-2015 ರಂದು ಪ್ರತ್ಯುತ್ತರ ನೀಡಿದ್ದೀರೀ ಎಂದರೆ ಇರಬಹುದು ಎನ್ನುತ್ತಾರೆ. ದಿಃ08-05-2015ರ ನೋಟಿಸ್ ನ್ನು ನಾನು ಮತ್ತು ನನ್ನ ತಾಯಿ ಸ್ವೀಕರಿಸಿದ್ದೆವೆ ಎಂದರೆ ಸರಿಯಲ್ಲ. ನಿಪಿ-12 ಮತ್ತು 13 ನಾನು ಮತ್ತು ನನ್ನ ತಾಯಿ ಸ್ವೀಕರಿಸಿದ ಅಂಚೆ ಸ್ವೀಕೃತಿಗಳಾಗಿವೆ ಎಂದರೆ ಸರಿಯಲ್ಲ. ಕ್ರಯದ ಕರಾರುಪತ್ರದಲ್ಲಿ ದಾಖಲಾತಿಗಳು ಆದ ನಂತರ ನಾವೇ ಕ್ರಯಪತ್ರ ಬರೆದುಕೊಡದಿದ್ದಲ್ಲಿ ನ್ಯಾಯಾಲಯದ ಮೂಲಕ ಕ್ರಯಪತ್ರ ಬರೆಸಿಕೊಳ್ಳುವಂತೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಆಸ್ತಿಯನ್ನು ಕಬಳಿಸಿ ಕ್ರಯಪತ್ರ ಬರೆದುಕೊಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೆಚ್ಚುವರಿ 50 ಸಾವಿರ ಕೇಳಿದ್ದನ್ನು ವಾದಿಯು ನೀಡಲಿಲ್ಲ ಎಂಬ ಕಾರಣಕ್ಕೆ ಇದುವರೆಗೂ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಬಾಕಿಯಿದ್ದಾಗ, ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ದಾವೆ ಹೂಡಿದ್ದೆವೆ ಎಂದರೆ ಸರಿ. ದಾವಾಸ್ವತ್ತು ನನ್ನ ತಾಯಿಯ ಹೆಸರಿಗೆ ಬಂದ ನಂತರ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದೆವೆ ಎಂದರೆ ಸರಿಯಲ್ಲ. ದಿಃ15-05-2015 ಮತ್ತು ದಿಃ20-05-2015 ರಂದು ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟು ಅವರನ್ನು ಸ್ವಾಧೀನದಿಂದ ಹೊರ ಹಾಕಲು ಪ್ರಯತ್ನಿಸಿದ್ದೆವು ಎಂದರೆ ಸರಿಯಲ್ಲ. 2,800/- ರೂ ಸಾಕ್ಷಿಗಳ ಸಮಕ್ಷಮ ಪಡೆದಿದ್ದರೂ ಸಹ ಶುದ್ಧ ಕ್ರಯಪತ್ರ ಬರೆದುಕೊಡದೇ ಸತಾಯಿಸುತ್ತಿದ್ದೆವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ

ಯಾವುದೇ ಹಕ್ಕು ಅಧಿಕಾರ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿರುವ ಸಹಿಯು ನನ್ನ ತಂದೆ ಮತ್ತು ತಾಯಿಗಳೋದೋ ಇಲ್ಲವೋ ಎಂದು ತಜ್ಞರ ಅಭಿಪ್ರಾಯ ಕೋರಲು ನನ್ನ ತಕರಾರು ಇಲ್ಲ. ಕ್ರಯದ ಕರಾರಿನಂತೆ ಅಂದಿನಿಂದ ಇಂದಿನವರೆಗೂ ವಾದಿಯವರೇ ದಾವಾಸ್ವತ್ತಿನ ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು